


ಕಲ್ಲಿನ ನೆಲಹಾಸು ಇಟ್ಟಿಗೆಗಳ ಮೇಲಿನ ಹೆಸರುಗಳು

# ಕರಡಿ ಕುಳಿ!

■ ಎಚ್.ಎಸ್. ನಂದಕುಮಾರ್

ರಮ್ಯ ಮನೋಹರ ಹಸಿರು ಹುಲ್ಲು ಹಾಸು, ಹಿಮಾಚ್ಛಾದಿತ ಗಿರಿಶಿಖರಗಳಿಂದ ಕಣ್ಮನ ಸೆಳೆಯುವ ಸ್ವಿಟ್ಜರ್ಲೆಂಡ್, ಧರೆಗಿಳಿದ ಸ್ವರ್ಗ. ಹೈನೋದ್ಯಮಕ್ಕೆ, ಚಾಕೊಲೇಟ್ ತಯಾರಿಕೆಗೆ ಹೆಸರುವಾಸಿ. ಸ್ವಿಟ್ಜರ್ಲೆಂಡಿನ ರಾಜಧಾನಿ ಬರ್ನ್‌ನಲ್ಲಿರುವ ಖ್ಯಾತ ವಿಜ್ಞಾನಿ ಐನ್‌ಸ್ಟೀನ್ ಮನೆಯ ಕುರಿತೂ ಹೆಚ್ಚಿನವರಿಗೆ ತಿಳಿದಿದೆ. ಆದರೆ ಅಲ್ಲಿರುವ 'ಕರಡಿ ಕುಳಿ' (ಬೇರ್ ಪಿಟ್) ಕುರಿತು ಕೇಳಿದ್ದೀರಾ?

ಬರ್ನ್ ಪಟ್ಟಣದ ಕುರಿತ ದಂತಕಥೆಯಂತೆ ಅದರ ಸಂಸ್ಥಾಪಕ ಜಹ್ರಿಂಜೆನ್‌ನ ಐದನೇ ಡ್ಯೂಕ್ ಬೆರ್ಥೋಲ್ಡ್ ತಾನು ಮೊದಲು ಬೇಟೆಯಾಡಿದ ಕರಡಿಯ ಹೆಸರನ್ನೇ ನಗರಕ್ಕೆ ನಾಮಕರಣ ಮಾಡಬೇಕೆಂದು ಬಯಸಿದನಂತೆ. ಜರ್ಮನ್ ಭಾಷೆಯಲ್ಲಿ 'ಬಾರ್' ಅಂದರೆ ಕರಡಿ. ಅದರ ಬಹುವಚನ 'ಬಾರೆನ್'. ಇದನ್ನೇ ಹ್ರಸ್ವಗೊಳಿಸಿ 'ಬರ್ನ್' ಎಂದು ನಾಮಕರಣ ಮಾಡಿದನಂತೆ. ಅಂದಿನಿಂದ ಕರಡಿ, 'ಬರ್ನ್'ನ ಲಾಂಛನವಾಗಿ ಅಲ್ಲಿಯ ಬಾವುಟ, ಅಧಿಕೃತ ಮುದ್ರೆಗಳಲ್ಲಿದೆ. ಅಷ್ಟೇ ಅಲ್ಲ ಈಗಲೂ ನಗರದ ಎಲ್ಲೆಡೆ ಕರಡಿಯ ವಿವಿಧ ಆಕೃತಿಯ ಪ್ರತಿಮೆಗಳು, ಚಿತ್ರಗಳನ್ನು ಇರಿಸಿದ್ದಾರೆ. ಅಂತೆಯೇ 'ಕರಡಿ' ಶಕ್ತಿ, ಧೈರ್ಯ ಹಾಗೂ ಸ್ವಾತಂತ್ರ್ಯದ ಸಂಕೇತವಾಗಿಯೂ ಬರ್ನೀಯರ ಸಾಂಸ್ಕೃತಿಕ ಹಾಗೂ ನಾಗರಿಕ ಜೀವನದಲ್ಲಿ ಹಾಸುಹೊಕ್ಕಾಗಿದೆ. ಅಲ್ಲಿನ ಜನರ ಮಧ್ಯಕಾಲೀನ ಮೂಲದ ಮುಂದುವರಿಕೆಯ ಚಿಹ್ನೆಯಾಗಿದೆ.

ಕರಡಿಗಳನ್ನು ಕಾಡಿನಿಂದ ಹಿಡಿದು ತಂದು ಬರ್ನ್ ಪಟ್ಟಣದಲ್ಲಿ ಸಾಕುವ ಕಾರ್ಯ 16ನೇ ಶತಮಾನದಿಂದಲೇ ಪ್ರಾರಂಭವಾಯಿತು. ಹಿಡಿದು ತಂದ ಕರಡಿಗಳನ್ನು ಬರ್ನ್‌ನ ಹಳೆಯ ಪಟ್ಟಣದಲ್ಲಿ ಸಣ್ಣ ಸಣ್ಣ ಕುಳಿಗಳಲ್ಲಿ ಇಡಲಾರಂಭಿಸಿದರು. ಈ ಕರಡಿ ಕುಳಿಗಳಿಗೆ ಜರ್ಮನ್ ಭಾಷೆಯಲ್ಲಿ 'ಬಾರೆನ್‌ಗ್ರಾಬೆನ್' ಎನ್ನುತ್ತಾರೆ. ಕಾಲಕ್ರಮೇಣ ಇದು ಪ್ರವಾಸಿಗರ ಆಕರ್ಷಣೆಯ ಕೇಂದ್ರಬಿಂದುವಾಯಿತು. ಬರ್ನ್‌ಗೆ ಭೇಟಿ ನೀಡಿದಾಗ ರಷ್ಯಾದ ಆಗಿನ ಅಧ್ಯಕ್ಷ ವ್ಲಾಡಿಮಿರ್ ಲೆನಿನ್ ಸಹ ಈ ಕರಡಿ ಕುಳಿಯನ್ನು ವೀಕ್ಷಿಸಿದ್ದರಂತೆ.

ಹಳೆಯ ಕರಡಿ ಕುಳಿಗಳು ಬಹಳ ಚಿಕ್ಕದಾಗಿದ್ದು ಕರಡಿಗಳಿಗೆ ಸ್ವಚ್ಛಂದವಾಗಿ ವಿಹರಿಸಲು ಸಾಧ್ಯವಿರಲಿಲ್ಲ. ಕ್ರಮೇಣ ಕಾಡುಪ್ರಾಣಿಗಳ ಕುರಿತು ಮಾನವನ ಧೋರಣೆ ಬದಲಾಗುತ್ತಾ ಬಂದಂತೆ ಈ ಕರಡಿ ಕುಳಿಗಳನ್ನು ಕಲ್ಲು, ಗಾರೆ, ಹುಲ್ಲುಗಳನ್ನು ಬಳಸಿ ಪುನರ್ನಿರ್ಮಾಣ ಮಾಡಲಾಯಿತು. ಈಗಿರುವ ಕರಡಿ ಕುಳಿಯನ್ನು 1857ರಲ್ಲಿ ಸ್ಥಾಪಿಸಲಾಯಿತು. ಆದರೆ ಅದೂ ಸರಿಯಿಲ್ಲ ಎನಿಸಿ 2009ರಲ್ಲಿ ಕರಡಿ ಉದ್ಯಾನ (ಬಾರೆನ್ ಪಾರ್ಕ್) ನಿರ್ಮಿಸಲಾಯಿತು. ಈಗ ದೊಡ್ಡ ಕುಳಿ ಇದೆ. 6000 ಚ.ಮೀ. ವ್ಯಾಪ್ತಿಯಲ್ಲಿ ಹರಡಿಕೊಂಡಿರುವ ಹುಲ್ಲುಗಾವಲು, ಮರಗಳು, ಸಣ್ಣ ಪುಟ್ಟ ಗುಡ್ಡಗಳು ಹಾಗೂ ಆರೆ ನದಿಗೆ ಹೊಂದಿಕೊಂಡಿರುವಂತೆ ಪುನರ್ನಿರ್ಮಾಣ ಮಾಡಲಾಗಿದೆ. ಹಾಗಾಗಿ ಈ ಉದ್ಯಾನ ಸಹಜ ಪ್ರಾಕೃತಿಕ ಪರಿಸರದ ಪಡಿಯಚ್ಚಿನಂತಿದೆ. ಹೀಗೆ 'ಕರಡಿ ಕುಳಿ' 'ಕರಡಿ ಉದ್ಯಾನ'ವಾಗಿರುವುದು ಪರಂಪರೆಯ ರಕ್ಷಣೆಯ ಜೊತೆಯಲ್ಲಿ ಬರ್ನೀಯರು ಇಟ್ಟುಕೊಂಡಿರುವ ಪರಿಸರ ಹಾಗೂ ಕಾಡುಪ್ರಾಣಿಗಳ ಕುರಿತಾದ ಕಾಳಜಿಯ ಸಂಕೇತವೂ ಆಗಿದೆ.

ನಮ್ಮ ಪ್ರವಾಸದ ವೇಳೆ ಈ ಕರಡಿ ಉದ್ಯಾನದ ಸುತ್ತಮುತ್ತಲಿನ ಪ್ರದೇಶದಲ್ಲಿರುವ ಕಲ್ಲಿನ ನೆಲಹಾಸು ಇಟ್ಟಿಗೆಗಳ ಮೇಲೆ ಹೆಸರುಗಳಿರುವುದನ್ನು ಗಮನಿಸಿದೆವು. ಕುತೂಹಲದಿಂದ ಅದೇನೆಂದು ವಿಚಾರಿಸಿದಾಗ, 2009ರಲ್ಲಿ ಕರಡಿ ಕುಳಿ ಪುನರ್ನಿರ್ಮಾಣ ಪ್ರಾರಂಭಿಸಿದಾಗ ಅದಕ್ಕೆ ಹಣಕಾಸು ಹೊಂದಿಸಲು ನೂರು ಸ್ವಿಸ್ ಫ್ರಾಂಕ್ (ಈಗಿನ ಸುಮಾರು 11,100 ರೂಪಾಯಿಗಳು) ಕೊಟ್ಟವರ ಹೆಸರನ್ನು ಕಲ್ಲಿನ ಇಟ್ಟಿಗೆಯಲ್ಲಿ ಕೆತ್ತಿ ಕರಡಿ ಉದ್ಯಾನದ ಸುತ್ತಮುತ್ತಲಿನ ಪ್ರದೇಶದಲ್ಲಿ ಹಾಕಲಾಗುವುದು ಎಂದು ಘೋಷಿಸಲಾಯಿತಂತೆ. ಅದಕ್ಕೆ ಭರ್ಜರಿ ಸ್ಪಂದನೆ ಸಿಕ್ಕಿ ಸುಮಾರು 12ರಿಂದ 15 ಸಾವಿರ ಜನ ಹಣ ನೀಡಿದರು ಎಂದು ತಿಳಿಯಿತು. ಈ ಕಲ್ಲಿನ ಇಟ್ಟಿಗೆಗಳು ಕೇವಲ ನಿಧಿ ಸಂಗ್ರಹಣೆಯ ಟೋಕನ್ ಆಗಿರದೆ ಅದು ಸಮುದಾಯವೊಂದು ತನ್ನ ಲಾಂಛನವಾದ ಕರಡಿಯ ಕುರಿತಾಗಿ ಇಟ್ಟುಕೊಂಡಿರುವ ಹೆಮ್ಮೆಯ ಕುರುಹಾಗಿದೆ.

ಕರಡಿ ಕುಳಿ ಬರ್ನ್ ನಗರದ ಹೆಗ್ಗುರುತಾಗಿದೆ. ಬರ್ನ್ ನಗರ ಸ್ಥಾಪನೆಯಾದ 12ನೇ ಶತಮಾನದಿಂದ ಇಲ್ಲಿಯವರೆಗೂ ಕರಡಿಯು ಬರ್ನ್ ನಿವಾಸಿಗಳ ಹೆಮ್ಮೆಯ, ಸ್ವಾತಂತ್ರ್ಯದ ಪ್ರತೀಕವಾಗಿದೆ. ಇದನ್ನು ಬರ್ನೀಯರು ಮಾರ್ಮಿಕವಾಗಿ "A Bear's pride is its courage. A Bernese's pride is the courage to bear all" (ಒಂದು ಕರಡಿಯ ಹೆಮ್ಮೆ ಅಂದರೆ ಅದರ ಧೈರ್ಯ. ಒಬ್ಬ ಬರ್ನೀಯನ ಹೆಮ್ಮೆ ಅಂದರೆ ಧೈರ್ಯದಿಂದ ಎಲ್ಲವನ್ನೂ ಸಹಿಸುವ ಶಕ್ತಿ) ಎಂದು ಹೇಳಿಕೊಳ್ಳುತ್ತಾರೆ! ■